Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| **भाग–IX** | **अनुभाग 1** |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| **सं–1** | **नई दिल्ली सोमवार, डिसेम्बर 15, 1986** | **मार्गशिर 24, 1908 (शक)** | **खण्ड–5** |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |


## MINISTRY OF LAW AND JUSTICE

(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely— (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಛೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## **ವಾಣಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, 1939**

(1939ರ ಅಧಿನಿಯಮ ಸಂಖ್ಯೆ 30)

[26ನೇ ಸೆಪ್ಟೆಂಬರ್, 1939.]

ಕೆಲವು ವಾಣಿಜ್ಯ ದಸ್ತಾವೇಜುಗಳ ಸಂಬಂಧದಲ್ಲಿ ಸಾಕ್ಷ್ಯ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಕೆಲವು ವಾಣಿಜ್ಯ ದಸ್ತಾವೇಜುಗಳ ಸಂಬಂಧದಲ್ಲಿ ಸಾಕ್ಷ್ಯ ಕಾನೂನನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಇದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ.–

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, 1939 ಎಂದು ಕರೆಯತಕ್ಕದ್ದು.

(2) ಇದು, 1956ರ ನವೆಂಬರ್ 1ರ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**ಕರ್ನಾಟಕ**

**ಕೇಂದ್ರ ಅಧಿನಿಯಮದ ತಿದ್ದುಪಡಿ 1939ರ XXX.–** ವಾಣಿಜ್ಯ ದಸ್ತಾವೇಜುಗಳ ಅಧಿನಿಯಮ, 1939ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ (ಕೇಂದ್ರ ಅಧಿನಿಯಮದ ತಿದ್ದುಪಡಿ, 1939ರ XXX) ರಾಜ್ಯಗಳ ಪುನರ್ ರಚನೆ ಅಧಿನಿಯಮ, 1956 (ಕೇಂದ್ರ ಅಧಿನಿಯಮ 1956ರ XXXVII) 7ನೇ ಪ್ರಕರಣದ 1ನೇ ಉಪ ಪ್ರಕರಣದ ಖಂಡ (ಎ) ಮತ್ತು (ಸಿ)ಯಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ ಭಾಗ 'ಬಿ' ರಾಜ್ಯಗಳಲ್ಲಿ ಪದಗಳು ಮತ್ತು ಅಂಕಿಗಳ ಬದಲಾಗಿ ಪದಗಳು, ಆವರಣಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

[ಕರ್ನಾಟಕ ಅಧಿನಿಯಮ, 1978ರ 33, ಪ್ರ. 7ನ್ನು ನೋಡಿ]

**2. ಅನುಸೂಚಿತ ದಸ್ತಾವೇಜುಗಳಲ್ಲಿನ ಸುಸಂಬದ್ಧ ಸಂಗತಿಗಳ ನಿರೂಪಣೆಗಳು ಸ್ವಯಂ ಸುಸಂಬದ್ಧ ಸಂಗತಿಗಳಾಗಿರತಕ್ಕದ್ದು.–** ಭಾರತೀಯ ಸಾಕ್ಷ್ಯ ಅಧಿನಿಯಮ, 1872ರಲ್ಲಿ (1872ರ 1) ಏನೇ ಒಳಗೊಂಡಿದ್ದರೂ, ಅನುಸೂಚಿಯಲ್ಲಿ ಸೇರಿಸಲಾಗಿರುವ ಯಾವುದೇ ದಸ್ತಾವೇಜಿನಲ್ಲಿ ಅಂಥ ದಸ್ತಾವೇಜಿನಲ್ಲಿ ಸಾಮಾನ್ಯವಾಗಿ ನಿರೂಪಿತವಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ, ವಿವಾದದಲ್ಲಿರುವ ಯಾವುದೇ ಸಂಗತಿಗಳ ಅಥವಾ ಸುಸಂಬದ್ಧ ಸಂಗತಿಗಳ ನಿರೂಪಣೆಗಳು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಬರುವ ಸ್ವಯಂ ಸುಸಂಬದ್ಧ ಸಂಗತಿಗಳಾಗಿರತಕ್ಕದ್ದು.

**3. ದಸ್ತಾವೇಜುಗಳ ನೈಜನೆಗೆ ಸಂಬಂಧಿಸಿದಂತೆ ಪೂರ್ವಭಾವನೆ.–** ಭಾರತ ಸಾಕ್ಷ್ಯ ಅಧಿನಿಯಮ, 1872ರ (1872ರ 1ರ) ಉದ್ದೇಶಗಳಿಗಾಗಿ ಮತ್ತು ಅದರಲ್ಲಿ ಏನೇ ಒಳಗೊಂಡಿದ್ದರೂ,

(ಎ) ಅನುಸೂಚಿಯ ಭಾಗ Iರಲ್ಲಿ ಒಳಗೊಂಡ ದಸ್ತಾವೇಜುಗಳ ಸಂಬಂಧದಲ್ಲಿ, ಆ ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಪೂರ್ವಭಾವನೆ ಮಾಡತಕ್ಕದ್ದು; ಮತ್ತು

(ಬಿ) ಅನುಸೂಚಿಯ ಭಾಗ IIರಲ್ಲಿ ಒಳಗೊಂಡ ದಸ್ತಾವೇಜುಗಳ ಸಂಬಂಧದಲ್ಲಿ, ಆ ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಪೂರ್ವಭಾವನೆ ಮಾಡಬಹುದು.

ಸಂದರ್ಭಾನುಸಾರವಾಗಿ ಅನುಸೂಚಿಯ ಭಾಗ I ಅಥವಾ ಭಾಗ IIರಲ್ಲಿ ಒಳಗೊಂಡ ದಸ್ತಾವೇಜು ಅದೇ ಎಂದು ಮತ್ತು ಸಮುಚಿತ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಯಥೋಚಿತವಾಗಿ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಹಾಗೆ ಮಾಡಲಾಯಿತೆಂದು ಮತ್ತು ಅದರಲ್ಲಿ ಅಡಕವಾಗಿರುವ ನಿರೂಪಣೆಗಳು ನಿಷ್ಕೃಷ್ಟವಾಗಿವೆಯೆಂದು ನ್ಯಾಯಾಲಯವು,–

**4. ಪರಿಭಾಷೆ.–** ಅನುಸೂಚಿಯಲ್ಲಿ "ಮನ್ನಣೆ ಪಡೆದ ವಾಣಿಜ್ಯ ಮಂಡಲಿ" ಎಂದರೆ ಅದರ ದೇಶದ ಸರ್ಕಾರವು ಮೂಲ ಸ್ಥಾನದ ಪ್ರಮಾಣಪತ್ರವನ್ನು ಕೊಡಲು ಸಕ್ಷಮವಾಗಿದೆಯೆಂದು ಮಾನ್ಯತೆ ಕೊಟ್ಟಂಥ ವಾಣಿಜ್ಯ ಮಂಡಲಿ ಮತ್ತು ಅದು ಅದೇ ರೀತಿಯಲ್ಲಿ ಮಾನ್ಯತೆ ಪಡೆದ ಇತರ ಯಾವುದೇ ಸಂಘವನ್ನು ಒಳಗೊಳ್ಳುತ್ತದೆ.

## ಅನುಸೂಚಿ

### (2ನೇ ಮತ್ತು 3ನೇ ಪ್ರಕರಣಗಳನ್ನು ನೋಡಿ)

### ಭಾಗ I

ಯಾವ ದಸ್ತಾವೇಜುಗಳ ಸಂಬಂಧದಲ್ಲಿ ನ್ಯಾಯಾಲಯವು "ಪೂರ್ವಭಾವನೆ ಮಾಡತಕ್ಕದೋ" ಆ ದಸ್ತಾವೇಜುಗಳು:–

1. ಲಾಯಿಡ್ಸ್ ರಿಜಿಸ್ಟರ್ ಆಫ್ ಷಿಪ್ಪಿಂಗ್.

2. ಲಾಯಿಡ್ಸ್ ಡೆಯ್ಲಿ ಷಿಪ್ಪಿಂಗ್ ಇಂಡೆಕ್ಸ್.

3. ಲಾಯಿಡ್ಸ್ ಲೋಡಿಂಗ್ ಲಿಸ್ಟ್.

4. ಲಾಯಿಡ್ಸ್ ವೀಕ್ಲಿ ಕ್ಯಾಷುಯಾಲಿಟಿ ರಿಪೋರ್ಟ್ಸ್.

5. ಮಂಚೆಸ್ಟರಷಿಪ್ ಕೆನಾಲ್ ಕಂಪನಿಗೆ ಸರಕುಗಳನ್ನು ಒಪ್ಪಿಸಿದ ಬಗ್ಗೆ ಪ್ರಮಾಣಪತ್ರ.

6. ಬ್ರಿಟಿಷ್ ಹಡಗು ಇಟ್ಟಿರುವ ಅಫಿಷಿಯಲ್ ಲಾಗ್ ಬುಕ್, ಸಪ್ಲಿಮೆಂಟರಿ ಲಾಗ್ ಬುಕ್ ಮತ್ತು ಅಫಿಷಿಯಲ್ ವೈರ್ ಲೆಸ್ ಲಾಗ್ ಬುಕ್.

7. ನೋಂದಣಿ ಪ್ರಮಾಣಪತ್ರ, ಸುರಕ್ಷತಾ ಪ್ರಮಾಣಪತ್ರ, ಸುರಕ್ಷತಾ ರೇಡಿಯೊ–ಟೆಲಿಗ್ರಾಫಿ ಪ್ರಮಾಣಪತ್ರ, ವಿನಾಯಿತಿ ಪ್ರಮಾಣಪತ್ರ, ಸಮೀಕ್ಷಾ ಪ್ರಮಾಣಪತ್ರ, ಸಮೀಕ್ಷಾ ಘೋಷಣೆ, ಅಂತರ ರಾಷ್ಟ್ರೀಯ ಲೋಡ್ ಲೈನ್ ಪ್ರಮಾಣಪತ್ರ, ಭಾರತ ಲೋಡ್ ಲೈನ್ ಪ್ರಮಾಣಪತ್ರ, ಸುರಕ್ಷಿತವಲ್ಲವೆಂದು ತಾತ್ಕಾಲಿಕವಾಗಿ ತಡೆಹಿಡಿಯಲಾದ ಹಡಗಿನ ಸಮೀಕ್ಷಾ ಅನಂತರ ಸುರಕ್ಷಿತವಲ್ಲವೆಂದು ಘೋಷಿಸಲಾದ ಹಡಗಿನ ಮಾಸ್ಟರನಿಗೆ ಜಾರಿ ಮಾಡಬೇಕಾದ ಸಮೀಕ್ಷಾ ವರದಿ. ಡಾಕಿಂಗ್ ಪ್ರಮಾಣಪತ್ರ, ಸಮುದ್ರದಲ್ಲಿ ಪ್ರಾಣದ ಸುರಕ್ಷತೆಯ ಸಲುವಾಗಿ ಮಾಡಿಕೊಂಡ 1929ರ ಅಂತರ ರಾಷ್ಟ್ರೀಯ ಒಡಂಬಡಿಕೆಯ 56ನೇ ಅನುಚ್ಛೇದದ ಮೇರೆಗೆ ಕೊಟ್ಟ ಜ್ಞಾಪನಪತ್ರ.

8. ಭಾರತ ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1923ರ ಮೇರೆಗೆ ಕೊಟ್ಟ 'ಎ' ಮತ್ತು 'ಬಿ' ಪ್ರಮಾಣಪತ್ರಗಳು.

9. ಸಮುದ್ರ ವಿಮೆಗೆ ಸಂಬಂಧಿಸಿದಂತೆ ಈ ಕೆಳಕಂಡ ದಸ್ತಾವೇಜುಗಳು ಎಂದರೆ, ವಿಮಾ ಪಾಲಿಸಿ, ಪ್ರೀಮಿಯಂ ರಸೀದಿ, ವಿಮಾ ಪ್ರಮಾಣ ಪತ್ರ ಮತ್ತು ವಿಮೆಯ ಈಡು ಪತ್ರದ ಕವರ್ ನೋಟ್ ಟಿಪ್ಪಣಿ.

10.ವಾಣಿಜ್ಯ ಇಲಾಖೆಯ 1938ರ ವಾಣಿಜ್ಯ ಸಮುದ್ರ ಇಲಾಖೆಯ ಸುತ್ತೋಲೆ ಕ್ರಮಾಂಕ 2ರ ಮೇರೆಗೆ ಸಮುಚಿತ ಪ್ರಾಧಿಕಾರವು ಹೊರಡಿಸಿದ ನಾಡ ದೋಣಿಯ ನಷ್ಟಕ್ಕೆ ಸಂಬಂಧಿಸಿದ ಪ್ರಮಾಣಪತ್ರ.

11.ಹಡಗಿನ ಒಡೆಯನ ಹೊಣೆಗಾರಿಕೆಗೆ ಬಾಧಕವನ್ನುಂಟು ಮಾಡುತ್ತದೆಯೆಂದು ಪರಿಗಣಿಸಿದ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಹಡಗಿನ ಮಾಸ್ಟರನು ನೋಟರಿ ಪಬ್ಲಿಕ್ ಅಥವಾ ಇತರ ತಕ್ಕ ಅಧಿಕೃತ ಅಧಿಕಾರಿಯ ಮುಂದೆ ಮಾಡಿದ ಪ್ರಸಾಕ್ಷ್ಯ.

12.ಹಡಗುಗಳಲ್ಲಿ ಅಥವಾ ವಿಮಾನಗಳಲ್ಲಿ ಒಯ್ಯುವ ರೇಡಿಯೋ–ಟೆಲಿಗ್ರಾಫ್ ಉಪಕರಣಗಳ ಬಗ್ಗೆ ಲೈಸನ್ಸು ಅಥವಾ ಅನುಮತಿ ಪತ್ರ.

13.ವಿಮಾನವು ಯಾವ ದೇಶಕ್ಕೆ ಸೇರಿರುತ್ತದೋ ಆ ದೇಶದ ಸರ್ಕಾರವು ನೀಡಿದ ವಿಮಾನದ ನೋಂದಣಿ ಪ್ರಮಾಣಪತ್ರ.

14.ವಿಮಾನವು ಯಾವ ದೇಶಕ್ಕೆ ಸೇರಿರುತ್ತದೋ ಆ ದೇಶದ ಸರ್ಕಾರದ ಮೂಲಕ ಅಥವಾ ಪ್ರಾಧಿಕಾರದ ಮೇರೆಗೆ ನೀಡಿದ ಅಥವಾ ಸಿಂಧುಗೊಳಿಸಿದ ವಿಮಾನಯಾನ ಯೋಗ್ಯತಾ ಪ್ರಮಾಣಪತ್ರ.

15.ವಿಮಾನ ಸಿಬ್ಬಂದಿ ವರ್ಗವು ಯಾವ ದೇಶಕ್ಕೆ ಸೇರಿರುತ್ತದೋ ಆ ದೇಶದ ಸರ್ಕಾರದ ಅಧಿಕಾರದ ಮೂಲಕ ಅಥವಾ ಮೇರೆಗೆ ವಿಮಾನ ಸಿಬ್ಬಂದಿ ಸಕ್ಷಮತೆಯ ಬಗ್ಗೆ ನೀಡಿದ ಅಥವಾ ಸಿಂಧುಗೊಳಿಸಿದ ಲೈಸನ್ಸುಗಳು ಮತ್ತು ಪ್ರಮಾಣಪತ್ರಗಳು.

16.ಈ ಬಗ್ಗೆ ಸರ್ಕಾರದಿಂದ ಅಧಿಕೃತಗೊಂಡ ಸಕ್ಷಮ ಪ್ರಾಧಿಕಾರವು ಕೊಟ್ಟ ಗ್ರೌಂಡ್ ಇಂಜಿನಿಯರಿನ ಲೈಸನ್ಸು.

17.ಹಡಗಿಗೆ ಸರಕು ತುಂಬಿಸಿದ ಅಥವಾ ತಡೆಹಿಡಿಯಲಾದ ಬಗ್ಗೆ ಕಾನ್ಸಿಲರ್ ಪ್ರಮಾಣಪತ್ರ ಮೂಲ ಸ್ಥಾನದ ಕಾನ್ಸಿಲರ್ ಪ್ರಮಾಣಪತ್ರಗಳು ಮತ್ತು ಕಾನ್ಸಿಲರ್ ಖರೀದಿ ಪಟ್ಟಿ.

18.ಮನ್ನಣೆ ಪಡೆದ ವಾಣಿಜ್ಯ ಮಂಡಲಿ ಅಥವಾ ಭಾರತೀಯ ಅಥವಾ ಬ್ರಿಟಿಷ್ ಕಾನ್ಸಿಲರ್ ಅಧಿಕಾರಿ ಅಥವಾ ಭಾರತೀಯ ಅಥವಾ ಬ್ರಿಟಿಷ್ ವ್ಯಾಪಾರೀ ಕಮೀಷನರ್ ಅಥವಾ ಏಜೆಂಟನಿಂದ ಕೊಡಲಾದ (ಆದರೆ ಕೇವಲ ಅವನು ಪ್ರಮಾಣೀಕರಿಸಿದ್ದಲ್ಲದೆ) ಸರಕುಗಳ ಮೂಲ ಸ್ಥಾನದ ಬಗ್ಗೆ ಪ್ರಮಾಣಪತ್ರ.

19.ಸೀಮಾ ಸುಂಕವನ್ನು ಸಂದಾಯ ಮಾಡಿದ ಬಗ್ಗೆ ಸೀಮಾ ಸುಂಕ ಪ್ರಾಧಿಕಾರದಿಂದ ಕೊಡಲಾದ ರಶೀದಿ.

20.ರೇವು, ಹಡಗುಕಟ್ಟೆ, ಬಂದರು, ಹಡಗುಕಟ್ಟೆ ಸುಂಕ ಅಥವಾ ಉಗ್ರಾಣದ ಪ್ರಾಧಿಕಾರದಿಂದ ಅಥವಾ ರೈಲ್ವೆ ಕಂಪನಿಯಿಂದ ಕೊಡಲಾದ ಸರಕುಗಳ ಸಂಬಂಧದಲ್ಲಿ ಸಂಗ್ರಹಣೆ, ಸಾಗಣೆ ಅಥವಾ ಇತರ ಸೇವೆಗಳಿಗಾಗಿ ಫೀಜುಗಳನ್ನು, ಬಾಕಿಗಳನ್ನು, ಸಾಗಣೆ ಬಾಡಿಗೆಗಳನ್ನು ಅಥವಾ ಇತರ ವೆಚ್ಚಗಳನ್ನು ತೋರಿಸುವ ಅನುಸೂಚಿ.

21.ಸಲ್ಲಿಸಲಾದ ಸೇವೆಗಳಿಗಾಗಿ ಮನ್ನಣೆ ಪಡೆದ ವಾಣಿಜ್ಯ ಮಂಡಳಿಯಿಂದ ಕೊಡಲಾದ ಹಡಗಿನ ಸುಂಕದ ಅನುಸೂಚಿ ಮತ್ತು ಫೀಜುಗಳು, ರುಸುಮು ಅಥವಾ ಇತರ ವೆಚ್ಚಗಳ ಅನುಸೂಚಿ.

22.ಇಂಡಿಯನ್ ರೈಲ್ವೆ ಕಾನ್ಫರೆನ್ಸ್ ಅಸೋಸಿಯೇಷನ್ ಕೋಚಿಂಗ್ ಅಂಡ್ ಗೂಡ್ಸ್ ಟಾರಿಫ್ಸ್ ಎಂಬ ಹೆಸರಿನ ಪ್ರಕಟಣೆ.

23.ಭಾರತ ಕಂಪನಿಗಳ ಅಧಿನಿಯಮ, 1913ರ ಮೇರೆಗೆ ದಾಖಲು ಮಾಡಿದ ಕಂಪನಿಗಳ ರಿಜಿಸ್ಟ್ರಾರನಿಂದ ಪ್ರಮಾಣೀಕರಿಸಲಾದ ಕಂಪನಿಯ ವಿವರಣ ಪತ್ರ ಅಥವಾ ಸಂಘದ ನಿಯಮಾವಳಿಗಳ ಪ್ರತಿ.

24.ನೋಟರಿ ಪಬ್ಲಿಕ್ ಅಥವಾ ಇತರ ತಕ್ಕ ಅಧಿಕೃತ ಅಧಿಕಾರಿಯ ಎದುರು ಮಾಡಿದ ವಿನಿಮಯ ಪತ್ರದ ಅಮಾನ್ಯತೆಯ ಬಗ್ಗೆ ಪ್ರಸಾಕ್ಷ್ಯ ಟಿಪ್ಪಣಿ ಮತ್ತು ಪ್ರಮಾಣಪತ್ರ.

## ಭಾಗ II

1. ಯಾವ ದಸ್ತಾವೇಜುಗಳ ಸಂಬಂಧವನ್ನು ನ್ಯಾಯಾಲಯವು "ಪೂರ್ವಭಾವನೆ ಮಾಡಬಹುದೋ" ಆ ದಸ್ತಾವೇಜುಗಳು:

   (i) ತುಂಬಿದ ಹಡಗು ಸರಕುಗಳ ಬಗ್ಗೆ; ಅಥವಾ

   (ii) ತುಂಬಿಸಿರುವ ಕಲ್ಲಿದ್ದಲಿನ ಪ್ರಮಾಣವನ್ನು ಪ್ರಮಾಣೀಕರಿಸುವ; ಅಥವಾ

   (iii) ಹಡಗಿನ ಸರಕು ಬಾಗಿಲುಗಳ ಭದ್ರತೆಯ ಬಗ್ಗೆ

   – ಸಕ್ಷಮ ಪ್ರಾಧಿಕಾರಿಯು ನೀಡಿದ ಸಮೀಕ್ಷ ವರದಿ.

2. ವಿದೇಶೀ ಹಡಗು ಇಟ್ಟಿರುವ ಅಧಿಕೃತ ಲಾಗ್ ಬುಕ್, ಅಧಿಕೃತ ಪೂರಕ ಲಾಗ್ ಬುಕ್ ಮತ್ತು ಅಧಿಕೃತ ವೈರಲೆಸ್ ಲಾಗ್ ಬುಕ್.

3. ರೇವು, ಹಡಗುಕಟ್ಟೆ, ಬಂದರು, ಹಡಗುಕಟ್ಟೆ ಸುಂಕದ ಪ್ರಾಧಿಕಾರದಿಂದ ಅಥವಾ ಪ್ರಾಧಿಕಾರದ ಮೇರೆಗೆ ಕೊಡಲ್ಪಟ್ಟ ಹಡಗುಕಟ್ಟೆ ಪ್ರಮಾಣಪತ್ರ, ಹಡಗುಕಟ್ಟೆ ಚಲನ್, ಹಡಗುಕಟ್ಟೆ ರಸೀದಿ ಅಥವಾ ವಾರಂಟು, ರೇವು ಉಗ್ರಾಣದ ಪ್ರಮಾಣಪತ್ರ ಅಥವಾ ವಾರೆಂಟು.

4. ಸರಕುಗಳನ್ನು ಹಡಗಿಗೆ ತುಂಬಿಸುವ ದಿನಾಂಕ ಅಥವಾ ಸಮಯ, ಅಂಗೀಕಾರದ ಸಲುವಾಗಿ ಸರಕುಗಳ ಆಗಮನ, ಹಡಗುಗಳ ಆಗಮನ ಅಥವಾ ಸರಕುಗಳನ್ನು ಅಂಗೀಕರಿಸುವುದು ಅಥವಾ ವರ್ಗಾವಣೆ ಮಾಡುವುದು ಅಥವಾ ಹಡಗುಗಳ ಲಂಗರು ಹಾಕಲು ಸ್ಥಳಾವಕಾಶ ಗೊತ್ತು ಮಾಡುವುದು, ಇವುಗಳಿಗೆ ಸಂಬಂಧಿಸಿದಂತೆ ಹಡಗು ಸಾಗಣೆ ಅಥವಾ ವಶಾವಣೆಗಾಗಿ ಸರಕುಗಳನ್ನು ಅಂಗೀಕರಿಸುವ ಬಗ್ಗೆ ನಿಯಂತ್ರಣವನ್ನು ಹೊಂದಿರುವ ರೇವಿನ, ಹಡಗುಕಟ್ಟೆಯ ಬಂದರಿನ, ಹಡಗು ಕಟ್ಟೆ ಸುಂಕದ ಅಥವಾ ಇತರ ಪ್ರಾಧಿಕಾರದಿಂದ ಕೊಡಲಾದ ಪ್ರಮಾಣಪತ್ರ.

5. ಸಂದಾಯ ಮಾಡಿದ ಬಾಕಿಗಳನ್ನು ತೂಕ ಮತ್ತು ಅಳತೆಯನ್ನು ಮತ್ತು ತಡೆಹಿಡಿಯಲಾದ ರವಾನಿಸಿದ ಸರಕುಗಳನ್ನು ತೋರಿಸುವ, ರೇವು ಪ್ರಾಧಿಕಾರದಿಂದ ಕೊಡಲಾದ ರಪ್ತು ಅರ್ಜಿ.

6. ಕಾನ್ಸರೆನ್ಸ್, ಲೈಸ್‌ನ್ಸ್‌ನ ಅಧಿಕೃತ ಅಳತೆಗಾರನಿಂದ ಅಥವಾ ಪ್ರಮಾಣವಚನ ಸ್ವೀಕರಿಸಿದ ಅಥವಾ ಲೈಸನ್ಸು ಪಡೆದ ಅಳತೆಗಾರನಿಂದ ಅಥವಾ ಮನ್ನಣೆ ಪಡೆದ ವಾಣಿಜ್ಯ ಮಂಡಲಿಯಿಂದ ಕೊಡಲಾದ ರವಾನಿಸಿದ ಸರಕಿನ ತೂಕ ಅಥವಾ ಅಳತೆಯನ್ನು ತೋರಿಸುವ ಪ್ರಮಾಣಪತ್ರ ರಸೀದಿ.

7. ರೇವು ಪ್ರಾಧಿಕಾರವು ಕೊಟ್ಟ ಹಡಗುಗಳ ಚಲನ ವಲನವನ್ನು ತೋರಿಸುವ ವರದಿಗಳು ಮತ್ತು ಪ್ರಕಟಣೆಗಳು ಮತ್ತು ಅಂಥ ಚಲನ ವಲನಗಳಿಗೆ ಸಂಬಂಧಿಸಿದಂತೆ ಅಂಥ ಪ್ರಾಧಿಕಾರವು ಕೊಟ್ಟ ಪ್ರಮಾಣ ಪತ್ರಗಳು.

8. ಹಾರಾಟಕ್ಕೋಸ್ಕರವಾಗಿ ಲೈಸನ್ಸು ಪಡೆದ ಗ್ರೌಂಡ್ ಇಂಜಿನಿಯರನ ಸಹಿ ಇರುವ ಸುರಕ್ಷತಾ ಪ್ರಮಾಣಪತ್ರ.

9. ವಿಮಾನದ ಬಗ್ಗೆ ವಿಮಾನದ ಒಡೆಯ ಅಥವಾ ನಡೆಸುವವರು ಇಟ್ಟಿರುವ ವಿಮಾನ ಲಾಗ್ ಬುಕ್, ಪ್ರಮಾಣದ ಲಾಗ್ ಬುಕ್ ಮತ್ತು ಲಾಗ್ ಬುಕ್.

10. ಸಾರ್ವಜನಿಕ ಸಾಗಣೆ ವಿಮಾನದಲ್ಲಿ ಒಯ್ಯಲಾದ ಪ್ರಯಾಣಿಕರ ಪಟ್ಟಿ ಅಥವಾ ಹಡಗುಗಳ ಸರಕುಗಳ ಪಟ್ಟಿ.

11. ಉಗಿ ಹಡಗು ಕಂಪನಿ ಅಥವಾ ವಾಯುಯಾನ ಕಂಪನಿಯಿಂದ ನೀಡಲಾದ ಪ್ರಯಾಣೀಕನ ಟಿಕೆಟು.

12. ವಿಮಾನದ ಮೂಲಕ ಸಾಗಿಸಿದ ಸರಕುಗಳ ಬಗ್ಗೆ ವಾಯುಯಾನ ಕಂಪನಿಯಿಂದ ಕೊಡಲಾದ ವಿಮಾನ ಸರಕು ರವಾನಿಸಿದ ಚೀಟಿ ಮತ್ತು ಸಾಮಾನ್ಯ ತಪಾಸಣೆ ಪತ್ರ ಮತ್ತು ಸಾಗಣೆದಾರನು ಇಟ್ಟುಕೊಂಡ ಅವುಗಳ ಪಕ್ಕಾ ಪ್ರತಿ ಅಥವಾ ದ್ವಿಪ್ರತಿ.

13. ವಿಮಾನ ಲೋಡ್ ಪೀಟು.

14. ಸೀಮಾ ಸುಂಕದ, ಉತ್ಪಾದನಾ ಸುಂಕದ, ರೇವಿನ ಹಡಗುಕಟ್ಟೆಯ ಬಂದರಿನ ಅಥವಾ ಹಡಗುಕಟ್ಟೆ ಸುಂಕದ ಪ್ರಾಧಿಕಾರದಿಂದ ಮನ್ನಣೆ ಪಡೆದ ಉಗ್ರಾಣದ ದಾಸ್ತಾನು ವಾರಂಟು.

15. ರೇವು, ಹಡಗುಕಟ್ಟೆ, ಬಂದರು, ಹಡಗುಕಟ್ಟೆ ಸುಂಕ ಅಥವಾ ಉಗ್ರಾಣದ ಪ್ರಾಧಿಕಾರ ಅಥವಾ ರೈಲ್ವೆ ಅಥವಾ ಉಗಿ ಹಡಗು ಕಂಪನಿಯಿಂದ ಸರಕುಗಳಿಗಾಗಿ ನೀಡಲಾದ ಸ್ವೀಕೃತಿ ರಸೀದಿ.

16. ಸೀಮಾ ಸುಂಕ ಅಥವಾ ಉತ್ಪಾದನಾ ಸುಂಕದ ಪ್ರಾಧಿಕಾರದಿಂದ ನೀಡಲಾದ ಸೀಮಾ ಸುಂಕ ಅಥವಾ ಉತ್ಪಾದನಾ ಸುಂಕದ ಪಾಸ್ ಮತ್ತು ಸೀಮಾ ಸುಂಕ ಅಥವಾ ಉತ್ಪಾದನಾ ಸುಂಕದ ಅನುಮತಿ ಪತ್ರ ಅಥವಾ ಪ್ರಮಾಣಪತ್ರ.

17. ಮನ್ನಣೆ ಪಡೆದ ವಾಣಿಜ್ಯ ಮಂಡಲಿಯಿಂದ ಕೊಡಲಾದ ಅಪರಿಹಾರ ಘಟನೆ ಪ್ರಮಾಣಪತ್ರ.

18. ಸಾಗಣೆಗಾಗಿ ಕಂಪನಿಗೆ ವಹಿಸಿಕೊಟ್ಟ ಸರಕುಗಳ ಸ್ವೀಕೃತಿಯ ಬಗ್ಗೆ ರವಾನೆದಾರನಿಗೆ ಕೊಡಲಾದ ರೈಲ್ವೆ ಅಥವಾ ಉಗಿ ಹಡಗು ಕಂಪನಿಯ ರಸೀದಿ.

19. ಅಂಚೆ ಮತ್ತು ತಂತಿ ಇಲಾಖೆಯಿಂದ ಕೊಡಲಾದ ರಸೀದಿ.

20. ಯಾವುದೇ ಸರಕುಗಳ ಗುಣಮಟ್ಟ, ಗಾತ್ರ, ತೂಕ ಅಥವಾ ಮೌಲ್ಯ ನಿರ್ಣಯ, ನೂಲಿ ನೆಳೆಯ ಕೌಂಟ್ ಅಥವಾ ನೂಲಿನೆಳೆ ಅಥವಾ ಇತರ ಸರಕುಗಳಲ್ಲಿರುವ ತೇವಾಂಶದ ಶೇಕಡಾವಾರು – ಇವುಗಳ ಸಂಬಂಧದಲ್ಲಿ ಮನ್ನಣೆ ಪಡೆದ ವಾಣಿಜ್ಯ ಮಂಡಲಿಯಿಂದ ಕೊಡಲಾದ ಪ್ರಮಾಣಪತ್ರ ಅಥವಾ ಸಮೀಕ್ಷೆಯ ಐತೀರ್ಪು.

21. ಭಾರತೀಯ ಕಂಪನಿಗಳ ಅಧಿನಿಯಮ, 1913 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಕಂಪನಿಗಳ ರಿಜಿಸ್ಟ್ರಾರನಲ್ಲಿ ದಾಖಲು ಮಾಡಲಾದ ಕಂಪನಿಯ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಲೆಕ್ಕ ಮತ್ತು ಲೆಕ್ಕಪರಿಶೋಧನಾ ವರದಿ ಇವುಗಳ ಬಗ್ಗೆ ಸದರಿ ರಿಜಿಸ್ಟ್ರಾರನಿಂದ ಪ್ರಮಾಣೀಕರಿಸಲಾದ ಪ್ರತಿ.

* * * * *